ಆದ್ದರಿಂದ ಕುಡಿಯುವ ನೀರಿನ ಸಲುವಾಗಿ ರಾಜ್ಯದಲ್ಲಿ ಹಣದ ಕೊರತೆಯಿಲ್ಲ. ಮಾನ್ಯ ಸದಸ್ಯರು ಏನಾದರೂ ಇಂಥ ಸಮಸ್ಯೆ ಇದೆ ಎಂದು ಹೇಳಿದರೆ ತಕ್ಷಣ ಸರ್ಕಾರ ಅದನ್ನು ಅಟೆಂಡ್ ಮಾಡಿ ಸಮಸ್ಯೆಯನ್ನು ಬಗೆಹರಿಸುತ್ತದೆ ಎನ್ನುವ ಮಾತನ್ನು ನಾನು ಹೇಳಲಿಚ್ಚಿಸುತ್ತೇನೆ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್:- ಮಾನ್ಯ ಅಧ್ಯಕ್ಷರೆ, ಕೊಡಗು ಜಿಲ್ಲೆಗೆ ಒಂದು ಪೈಸೆ ಹಣವನ್ನು ಬಿಡುಗಡೆ ಮಾಡಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ಉತ್ತರ ಹೇಳಲಿಲ್ಲ.

ಅಧ್ಯಕ್ಷರು:- ಸದರಿ ಪ್ರಶ್ನೆಗೆ ಅರ್ಧ ಗಂಟೆ ಅವಕಾಶ ಕೊಟ್ಟಿದ್ದೇನೆ. ಈಗಾಗಲೇ ಎಲ್ಲಾ ವಿಷಯಗಳನ್ನು ಕೇಳಲಾಗಿದೆ. ಇವತ್ತಿನದಿವಸ ಬಾಕಿ ಉಳಿದಿರತಕ್ಕಂಥ ಪ್ರಶ್ನೆಗಳನ್ನು ಮುಂದಿನ ದಿವಸದಲ್ಲಿ ತೆಗೆದುಕೊಳ್ಳುತ್ತೇನೆ. ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು. ಮಾನ್ಯ ಚಂದ್ರೇಗೌಡರೆ, ಲಿಖಿತದ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದೆ ಮಂಡಿಸಿ.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಬಿ. ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, ದಿನಾಂಕ 26.03.2003ರ ಲಿಖಿತ ಮೂಲಕ ಉತ್ತರಿಸುವ 84 ಪ್ರಶ್ನೆಗಳ ಪೈಕಿ 70 ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ. (ಅನುಬಂಧ -1)

ಅಧ್ಯಕ್ಷರು:- ಮಂಡಿಸಲಾಯಿತು.

ಶ್ರೀ ಎ.ಎಸ್.ಗುರುಸ್ವಾಮಿ:- ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ನನ್ನದೊಂದು ಪ್ರಶ್ನೆ ಇದೆ. ತಾವು ನನಗೆ ಅವಕಾಶ ಮಾಡಿಕೊಡಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ, ಶೂನ್ಯವೇಳೆಯಲ್ಲಿ ಒಂದು ಮುಖ್ಯವಾದ ಅಂಶವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು:- ಶೂನ್ಯ ವೇಳೆಯಲ್ಲಿ ಒಂದೊಂದು ಪಾರ್ಟಿಯಿಂದ ಒಬ್ಬರಿಗೆ ಅವಕಾಶ ಕೊಡುವುದಕ್ಕೆ ನಾನು ತಯಾರಿದ್ದೇನೆ.

ಶ್ರೀ ಎ.ರಾಮದಾಸ್:- ನನ್ನದೊಂದು ವಿಷಯ ಇದೆ. ತಾವು ದಯವಿಟ್ಟು ನನಗೂ ಕೂಡ ಅವಕಾಶ ಕೊಡಬೇಕು.

ಅಧ್ಯಕ್ಷರು:- ಒಂದೊಂದು ಪಾರ್ಟಿಯಿಂದ ಯಾರಾದರೊಬ್ಬರಿಗೆ ಅವಕಾಶ ಕೊಡುತ್ತೇನೆ. ತಮ್ಮಲ್ಲಿ ಯಾರು ಮಾತನಾಡುತ್ತೀರಿ ಎನ್ನತಕ್ಕಂಥದ್ದನ್ನು ತಾವೇ ಆಯ್ಕೆ ಮಾಡಿಕೊಳ್ಳಿ.

ಶ್ರೀ ಎ. ರಾಮದಾಸ್:- ತಾವು ನಮ್ಮ ರಕ್ಷಣೆಗೆ ಬರದಿದ್ದರೆ ಹೇಗೆ?

ಅಧ್ಯಕ್ಷರು:- ತಾವು ದಯವಿಟ್ಟು ಕುಳಿತುಕೊಳ್ಳಿ. ಅಕಾಮಡೇಟ್ ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಇವತ್ತು ಎಲ್ಲಾ ಪಾರ್ಟಿಯವರಿಗೂ ಕೂಡ ಅವಕಾಶ ಕೊಡಬೇಕಾಗುತ್ತದೆ.

2. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:

ವಿಷಯ:- ಕುಂದಾಪುರದ ಸ್ಫೂರ್ತಿ ವಸತಿ ನಿಲಯಕ್ಕೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಶ್ರೀ ಡಿ.ವಿ. ಸದಾನಂದಗೌಡ(ಪುತ್ತೂರು):- ಮಾನ್ಯ ಅಧ್ಯಕ್ಷರೆ, ಒಂದು ಗಂಭೀರವಾದಂಥ ವಿಚಾರವನ್ನು ಈ ಸದನದ ಮುಂದೆ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಕೊರಗ ಜನಾಂಗಕ್ಕೆ ಸಂಬಂಧಪಟ್ಟಂತೆ ಈ ಸರ್ಕಾರ ಅಪಾರ ಕಾಳಜಿಯನ್ನು ವಹಿಸಿದೆ. ಮಾನ್ಯ

ಕಾಗೋಡು ತಿಮ್ಮಪ್ಪನವರು ಹಿಂದೆ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳು ಆಗಿದ್ದಂಥ ಸಂದರ್ಭದಲ್ಲಿ ಕೊರಗ ಜನಾಂಗದ ಅಜಲು ಪದ್ಧತಿಯನ್ನು ರದ್ದು ಮಾಡತಕ್ಕಂಥ ಒಂದು ಶಾಸನವನ್ನು ತಂದಿದ್ದರು. ಅಂದರೆ, ಕೊರಗ ಜನಾಂಗಕ್ಕೆ ಸಂಬಂಧಪಟ್ಟಂತೆ ವಿಶೇಷವಾದಂಥ ಒಂದು ಕಾಳಜಿಯನ್ನು ತಾವು ವಹಿಸಿದ್ದೀರಿ. ಇದಕ್ಕೆ ನಾನು ಅಭಿನಂದಿಸುತ್ತೇನೆ. ಆದರೆ, ಇವತ್ತಿನ ಪರಿಸ್ಥಿತಿ ನೋಡಿದರೆ, ತಮ್ಮ ಮನಸ್ಸಿನಲ್ಲಿ ಏನು ಭಾವನೆಗಳಿತ್ತೋ ಅದರ ವಿರುದ್ಧವಾಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಉದಾಹರಣೆಗೆ ಹೇಳುವುದಾದರೆ, ಕುಂದಾಪುರದಲ್ಲಿ ಕೊರಗ ಜನಾಂಗದ ಮಕ್ಕಳಿಗೋಸ್ಕರ ಸ್ಫೂರ್ತಿ ಎನ್ನತಕ್ಕಂಥ ಅನುದಾನಿತ ವಸತಿ ನಿಲಯ ಇರತಕ್ಕಂಥದ್ದು ತಮ್ಮ ಗಮನಕ್ಕೆ ಬಂದಿದೆ ಎಂದು ಭಾವಿಸುತ್ತೇನೆ. ಅಲ್ಲಿ ಸುಮಾರು 45 ಜನ ಬಾಲಕರು ಮತ್ತು 35 ಜನ ಬಾಲಕಿಯರು, ಅಂದರೆ ಸುಮಾರು 80 ಜನ ಮಕ್ಕಳಿರತಕ್ಕಂಥ ಆ ಒಂದು ವಸತಿ ನಿಲಯಕ್ಕೆ ಅನುದಾನ ಒದಗಿಸಬೇಕು ಎನ್ನತಕ್ಕಂಥ ವಿಷಯ ನಮ್ಮ ಮುಂದೆ ಇದೆ. ಇವತ್ತಿನ ದಿವಸ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು 1200 ಕ್ಕಿಂತ ಹೆಚ್ಚು ಮಕ್ಕಳು ಶಾಲೆಯಿಂದ ದೂರ ಉಳಿದಿರತಕ್ಕಂಥದ್ದನ್ನು ನಾವು ನೋಡಿದ್ದೇವೆ.

ಅಧ್ಯಕ್ಷರು:- ಮಾನ್ಯ ಕರಿಯಣ್ಣನವರೆ, ಮತ್ತು ಮಾನ್ಯ ಕೃಷ್ಣಮೂರ್ತಿಯವರೆ, ಇಲ್ಲಿ ಗುಂಪು ಸೇರಿ ಮಾತನಾಡುವುದಕ್ಕೆ ಹೋಗಬೇಡಿ. ನೀವು ಈ ರೀತಿ ಮಾತನಾಡುವುದಕ್ಕೋಸ್ಕರ ಲೌಂಜ್ ಇದೆ. ದಯವಿಟ್ಟು ತಾವು ಲೌಂಜ್‌ಗೆ ಹೋಗಿ ಮಾತನಾಡಿಕೊಳ್ಳಿ.

ಶ್ರೀ ಡಿ.ವಿ. ಸದಾನಂದಗೌಡ:- ಈ ಒಂದು ಅನುದಾನಿತ ಶಾಲೆಗೆ ಸರ್ಕಾರದ ಆದೇಶದ ಪ್ರಕಾರ ಹಿಂದೆ ಹಣ ಬಿಡುಗಡೆಯಾಗುತ್ತಿತ್ತು. ಹಾಗೆಯೇ ಅಲ್ಲಿರತಕ್ಕಂಥ ಮಕ್ಕಳಿಗೆ ಊಟ ಉಪಚಾರದ ವ್ಯವಸ್ಥೆ ಕೂಡ ಇತ್ತು. ಆದರೆ, ಇತ್ತೀಚೆಗೆ ಸುಮಾರು 8 ತಿಂಗಳಿಂದ ಈ ಒಂದು ಸಂಸ್ಥೆಗೆ ಅನುದಾನ ಬಿಡುಗಡೆ ಮಾಡಿಲ್ಲ. ಅನುದಾನ ಬಿಡುಗಡೆ ಮಾಡುವಂತೆ ಜಿಲ್ಲಾ ಪಂಚಾಯತ್‌ಗೆ ಆದೇಶ ನೀಡಿದರೂ ಕೂಡ ಜಿಲ್ಲಾ ಪಂಚಾಯತ್‌ನವರು ಅನುದಾನ ಬಿಡುಗಡೆ ಮಾಡುತ್ತಿಲ್ಲ. ಇವತ್ತಿನದಿವಸ ಈ ಒಂದು ಸಂಸ್ಥೆಯ ಪರಿಸ್ಥಿತಿ ಎಲ್ಲಿಗೆ ಬಂದಿದೆ ಎಂದರೆ, ಭಿಕ್ಷಾಟನೆ ಮೂಲಕ ಆ ಕೊರಗ ಮಕ್ಕಳಿಗೆ ಊಟ ಕೊಡತಕ್ಕಂಥ ವ್ಯವಸ್ಥೆಯನ್ನು ಅಲ್ಲಿ ಮಾಡುತ್ತಿದ್ದಾರೆ. ಹಾಗೆಯೇ, ಇವತ್ತಿನದಿವಸ ಈ ಒಂದು ಸಂಸ್ಥೆಯ ಕಾರ್ಯದರ್ಶಿಯವರು ಅನುದಾನ ಬಿಡುಗಡೆ ಮಾಡಿಲ್ಲವೆಂದು ನಿರಶನ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಈ ಸಂದರ್ಭದಲ್ಲಿ ನಾನು ಹೇಳುವುದು ಏನೆಂದರೆ, ಕೊರಗ ಜನಾಂಗದ ಮಕ್ಕಳ ಭವಿಷ್ಯದ ಬಗ್ಗೆ ತಮಗೆ ಕಾಳಜಿ ಇದೆ. ಹಾಗೆಯೇ, ಇವರಿಗೋಸ್ಕರ ನೂರಾರು ಕೆಲಸಕಾರ್ಯಗಳನ್ನು ಮಾಡಬೇಕೆಂದು ತಾವು ಆಲೋಚನೆ ಕೂಡ ಮಾಡಿದ್ದೀರಿ. ಇಷ್ಟೆಲ್ಲಾ ಆದರೂ ಕೂಡ ಈ ಒಂದು ಸಂಸ್ಥೆಗೆ 8 ತಿಂಗಳಿಂದ ಅನುದಾನ ಬಿಡುಗಡೆ ಆಗದೇ ಇರುವುದರಿಂದ ಸದರಿ ಸಂಸ್ಥೆಯ ಕಾರ್ಯದರ್ಶಿಯವರು ನಿರಶನ ಮಾಡುವಂಥ ಒಂದು ಪರಿಸ್ಥಿತಿ ಬಂದಿದೆ. ಈ ಸಂದರ್ಭದಲ್ಲಿ ನಾನು ಆಗ್ರಹಿಸುವುದು ಏನೆಂದರೆ, ಕೊರಗ ಮಕ್ಕಳ ಭವಿಷ್ಯದ ಬಗ್ಗೆ ಚಿಂತನೆ ಮಾಡಬೇಕು. ಹಾಗೇಯೇ, ಸರ್ಕಾರದ ಆದೇಶದ ಪ್ರಕಾರ ಹಿಂದೆ ಏನು ಅನುದಾನ ಬಿಡುಗಡೆ ಆಗುತ್ತಿತ್ತು. ಆ ಅನುದಾನ ಪುನಃ ಬಿಡುಗಡೆ ಮಾಡುವಂಥ ವ್ಯವಸ್ಥೆಯಾಗಬೇಕು. ಹಾಗೆಯೇ ಈ ಒಂದು ಸಂಸ್ಥೆಯ ಕಾರ್ಯದರ್ಶಿಯವರು ನಿರಂತರವಾಗಿ ಸಂಸ್ಥೆಯನ್ನು ನಡೆಸುವುದಕ್ಕೆ ಸರ್ಕಾರ ಅನುವು ಮಾಡಿಕೊಡಬೇಕು ಎಂದು ನಾನು ಈ ಸಂದರ್ಭದಲ್ಲಿ ಆಗ್ರಹ ಮಾಡುತ್ತೇವೆ. ಮತ್ತು ಅವರು ನಿರಶನವನ್ನು ಹಿಂತೆಗೆದುಕೊಳ್ಳುವುದಕ್ಕೆ ಸರ್ಕಾರದ ಮುಖಾಂತರ ಸೂಚನೆ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು:- ಉತ್ತರ ರೆಡಿ ಇದ್ದರೆ ಕೊಡಿ. Otherwise, no compulsion.

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಕುಟುಂಬ ಕಲ್ಯಾಣ ಮತ್ತು ವಾರ್ತಾ ಪ್ರಸಾರ ಇಲಾಖೆಯ ಸಚಿವರು):- ಮಾನ್ಯ ಅಧ್ಯಕ್ಷರೆ, ಅಲ್ಲಿ ನಡೆಯುತ್ತಿರುವ ಸ್ಫೂರ್ತಿ ಸಂಸ್ಥೆಗೆ ನಾನೂ ಕೂಡ ಭೇಟಿ ನೀಡಿದ್ದೇನೆ. ಅಲ್ಲಿ ಒಬ್ಬ ಹುಡುಗ ಶಾಲೆ ಮತ್ತು ಹಾಸ್ಟಲ್‌ನ್ನು ನಡೆಸುತ್ತಿದ್ದಾನೆ. ಅಲ್ಲಿ ಒಳ್ಳೆಯ ಕೆಲಸ ಮಾಡುತ್ತಿರುವುದರಿಂದ ನಾವು ಅನೇಕ ರೀತಿಯ ಸಹಾಯ ಮಾಡಿದ್ದೇವೆ. ಹಾಗೆಯೇ ಅದನ್ನು ಗ್ರಾ ಂಟ್-ಇನ್-ಏಡ್‌ಗೆ ಅಡ್ಮಿಟ್ ಮಾಡುವುದಕ್ಕೆ ಜಿ.ಓ. ಕೂಡ ಮಾಡಿದ್ದೇವೆ.

ಅಧ್ಯಕ್ಷರು:- ಮಾನ್ಯ ವಿಶ್ವನಾಥ್‌ರವರು ಮತ್ತು ಯಾರ್ಯಾರು ನಿಂತುಕೊಂಡು ಮಾತನಾಡುತ್ತಿದ್ದೀರಿ, ತಾವೆಲ್ಲರೂ ಕೂಡ ಲೌಂಜ್‌ಗೆ ಹೋಗಿ ಮಾತನಾಡಿ.

ಶ್ರೀ ಕಾಗೋಡು ತಿಮ್ಮಪ್ಪ:- ಈಗ ಕೊರಗ ಮಕ್ಕಳಿಗೋಸ್ಕರ ಉಡುಪಿ ಜಿಲ್ಲೆಯಲ್ಲಿ ಸಾಕಷ್ಟು ಆಶ್ರಮ ಶಾಲೆಗಳಿವೆ. ನಾನು ಇಲ್ಲವೆಂದು ಹೇಳುವುದಿಲ್ಲ. ಇಷ್ಟೆಲ್ಲಾ ವ್ಯವಸ್ಥೆ ಇದ್ದರೂ ಕೂಡ ಖಾಸಗಿಯಾಗಿ ಈ ಒಂದು ಸಂಸ್ಥೆಯನ್ನು ನಡೆಸುತ್ತಿರುವ ಕಾರಣ ಅವರಿಗೆ ಈ ಒಂದು ವ್ಯವಸ್ಥೆಯನ್ನು ಮಾಡಿಕೊಟ್ಟಿದ್ದೇವೆ. ಇಲ್ಲಿ ಏನಾಗಿದೆ ಎಂದರೆ, ಈ ಸಂಸ್ಥೆಗೆ ಗ್ರಾ ಂಟ್ ಕೊಡುವುದಕ್ಕೆ ಜಿಲ್ಲಾ ಪಂಚಾಯತ್‌ನವರು ಅಗತ್ಯವಾಗಿರತಕ್ಕಂಥ ಹಣವನ್ನು ವರ್ಷದ ಪ್ರಾರಂಭದಲ್ಲಿಯೇ ಇಟ್ಟುಕೊಳ್ಳಬೇಕಾಗಿತ್ತು. ಆದರೆ, ಅವರು ಹಣ ಇಟ್ಟುಕೊಂಡಿರಲಿಲ್ಲ. ಆದರೂ ಕೂಡ ನಾನು ಅಲ್ಲಿಗೆ ಹೋದಂಥ ಸಂದರ್ಭದಲ್ಲಿ ಅವರು ಮಾಡತಕ್ಕಂಥ ಕೆಲಸ ತೃಪ್ತಿಯಾದ ಮೇಲೆ ಜಿ.ಓ. ಇಷ್ಯೂ ಮಾಡಿದ್ದೇವೆ. ಆದರೆ, ಸಕಾಲದಲ್ಲಿ ಬೇಕಾಗಿರತಕ್ಕಂಥ ದಾಖಲೆ ಪತ್ರಗಳನ್ನು ಅವರು ಒದಗಿಸಬೇಕಾಗಿತ್ತು. ಸರ್ಕಾರ ಕೊಡತಕ್ಕಂಥ ಗ್ರಾ ಂಟ್‌ನ್ನು ಹಾಗೆಯೇ ಹೋಗಿ ಕೊಟ್ಟುಬಿಡುವುದಕ್ಕೆ ಆಗುವುದಿಲ್ಲ. ಅವರು ಆಡಿಟ್, ಅಕೌಂಟ್ಸ್ ರಸೀತಿ ಮತ್ತು ಇತರೇ ದಾಖಲೆಗಳನ್ನು ಕೊಡಬೇಕಾಗುತ್ತದೆ. ಕೊನೇ ಗಳಿಗೆಯಲ್ಲಿ ಜಿಲ್ಲಾಪಂಚಾಯತ್‌ನಲ್ಲಿ ಅಗತ್ಯವಾಗಿ ಬೇಕಾಗಿರತಕ್ಕಂಥ ಬಜೆಟ್‌ನ್ನು ಪ್ರಾವಿಜನ್ ಮಾಡಿಕೊಳ್ಳದಿದ್ದ ಪ್ರಯುಕ್ತ ಸ್ವಲ್ಪ ವಿಳಂಬವಾಗಿದೆ. ನಾನು ಇತ್ತೀಚೆಗೆ ಅಲ್ಲಿಗೆ ಹೋಗಿದ್ದಂಥ ಸಂದರ್ಭದಲ್ಲಿ ಅವರೂ ಕೂಡ ಅಲ್ಲಿಗೆ ಬಂದಿದ್ದರು. ಗ್ರಾ ಂಟ್ ತೆಗೆದುಕೊಳ್ಳಬೇಕಾದರೆ ಸ್ವಲ್ಪ ಸಮಾಧಾನದಿಂದ ಕೇಳತಕ್ಕಂಥದ್ದನ್ನು ಅವರು ಮಾಡಬೇಕಾಗುತ್ತದೆ. ಆದರೆ, ಅದನ್ನು ಬಿಟ್ಟು ಅಧ್ಯಕ್ಷರಿಗೆ ಮತ್ತು ಇತರರಿಗೆ ಬಯ್ಯುತ್ತಾ ಹೋದರೆ ಹೇಗೆ? ಅವರು ಬಹಳ ಚೆನ್ನಾಗಿ ಆ ಒಂದು ಸಂಸ್ಥೆಯನ್ನು ನಡೆಸುತ್ತಿದ್ದುದರಿಂದ ನಾನೂ ಕೂಡ ಸಿ.ಇ.ಒ.ರವರಿಗೆ ಇದನ್ನು ಆದಷ್ಟು ಬೇಗ ಕ್ಲಿಯರ್ ಮಾಡಬೇಕೆಂದು ಹೇಳಿದ್ದೇನೆ. ಈಗ ಹೊಸ ಅಧ್ಯಕ್ಷರು ಬಂದಿದ್ದಾರೆ. ಆದರೆ ಮೊದಲು ಇದ್ದಂಥ ಹಳೆಯ ಅಧ್ಯಕ್ಷರ ಮನಸ್ತಾಪದಿಂದಲೇ ಈ ರೀತಿಯಾಗಿದೆ. ಈ ಸಂದರ್ಭದಲ್ಲಿ ನಿಮ್ಮ ಗಮನಕ್ಕೆ ತರುವುದೇನೆಂದರೆ, ಆ ಒಂದು ಸಂಸ್ಥೆಗೆ ಅನೇಕ ರೀತಿಯ ತರಬೇತಿ ಕಾರ್ಯಕ್ರಮಗಳಿಗೆ ಅವಕಾಶ ಮಾಡಿಕೊಟ್ಟಿದ್ದೇವೆ. ಅಂದರೆ ಸೈಕಲ್ ರಿಪೇರಿ ಮತ್ತು ಮೋಟರ್ ರಿಪೇರಿ, ಕ್ರಾಫ್ಟ್ ಮತ್ತು ಮೆಷೀನರಿಗೆ ಸಂಬಂಧಪಟ್ಟಂಥ ಅನೇಕ ಕಾರ್ಯಕ್ರಮಗಳಿಗೆ ಅವಕಾಶ ಮಾಡಿಕೊಟ್ಟಿದ್ದೇವೆ. ಅಲ್ಲಿರತಕ್ಕಂಥ ಹುಡುಗ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾನೆಂದು ನಾನು ಈಗಾಗಲೇ ಸಿ.ಇ.ಓ ರವರಿಗೂ ಕೂಡ ಹೇಳಿದ್ದೇನೆ. ಸರ್ಕಾರದ ಅಜ್ಜಿ ಇದ್ದ ಮೇಲೆ ಅದರ ಪ್ರಕಾರ ಗ್ರಾಂಟ್‌ನ್ನು ಕೊಡಲೇಬೇಕಾಗುತ್ತದೆ.